# 26-07-2024

## VIDYAVARDHAKA SANGHA(R), MYSURU
## VIDYAVARDHAKA FIRST GRADE COLLEGE
Sheshadri Iyer Road, Mysuru – 570 001




# KARGIL
## VIJAY DIWAS
Saluting the Real Heroes




**Resource Person**

**Major. Shriharsha B S**

**ANO,NCC Officer, VVFGC, Mysore**




**Dr.P.K.Govardhan**
Staff Coordinator

**Dr.S.MariGowda**
Principal, VVFGC, Mysuru

Date: 26-07-2024 Friday | Time: 11.30 AM | Venue Chikkaboriah Auditorium



ಸ್ವಾತಂತ್ರ್ಯ ನಂತರ ಭಾರತದ ವಿರುದ್ಧ ಶತ್ರು ರಾಷ್ಟ್ರಗಳು ಅನೇಕ ಯುದ್ಧಗಳನ್ನು ಸಾರಿವೆ. ಆದರೆ 1999ರಲ್ಲಿ ನಡೆದ ಕಾರ್ಗಿಲ್ ಯುದ್ಧವನ್ನು ಇಂದಿಗೂ ಸಹ ಭಾರತೀಯರು ಮರೆಯಲು ಸಾಧ್ಯವಿಲ್ಲವೆಂದು ಮೇಜರ್ ಡಾ.ಶ್ರೀಹರ್ಷ.ಬಿ.ಎಸ್ ಅವರು ಅಭಿಪ್ರಾಯ ಪಟ್ಟರು.

ನಗರದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ದಿನಾಂಕ:26.07.2024ರ ಶುಕ್ರವಾರ ಆಯೋಜಿಸಿದ್ದ ಕಾರ್ಗಿಲ್ ವಿಜಯ್ ದಿವಸ್ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ವಿದ್ಯಾರ್ಥಿಗಳಿಗೆ ಕಾರ್ಗಿಲ್ ವಿಜಯ್‌ದಿವಸ್‌ನ ಮಹತ್ವದ ಕುರಿತು ಮಾತನಾಡುತ್ತಿದ್ದರು. ಕಾರ್ಗಿಲ್ ಘಟನೆಯನ್ನು ಯುದ್ಧವೆಂದು ಕರೆಯಲು ಸಾಧ್ಯವಿಲ್ಲ ಆದರೂ ಒಂದು ಯುದ್ಧದಲ್ಲಿ ಸಂಭವಿಸಬಹುದಾದ ಎಲ್ಲಾ ದುರಂತಗಳನ್ನೂ ಕಾಣಬಹುದು. ನೆರೆ ರಾಷ್ಟ್ರದವರು 1971ರ ಶಿಮ್ಲಾ ಒಪ್ಪಂದವನ್ನು ಮುರಿದು ಭಾರತದ ಕಾರ್ಗಿಲ್–ದ್ರಾಸ್ ಸೆಕ್ಟಾರ್‌ನ ನೆಲವನ್ನು ಆಕ್ರಮಿಸಿಕೊಳ್ಳಲು ಮಾಡಿದ ಪ್ರಯತ್ನವನ್ನು ಭಾರತೀಯ ಸೈನಿಕರು ಬಗ್ಗು ಬಡಿದು ಭಾರತದ ಕಾರ್ಗಿಲ್ ನೆಲದಲ್ಲಿ ವಿಜಯವನ್ನು ಸ್ಥಾಪಿಸಿದರು. ಈ ದಿನವನ್ನು ಭಾರತೀಯರಾದ ನಾವು ಅತ್ಯಂತ ಹೆಮ್ಮೆಯಿಂದ "ಕಾರ್ಗಿಲ್ ವಿಜಯ್ ದಿವಸ್" ಎಂದು ಸ್ಮರಿಸುತ್ತಾ ಬಂದಿರುತ್ತೇವೆ. ಈ ಘಟನೆಯಲ್ಲಿ 1200ಕ್ಕೂ ಹೆಚ್ಚು ಭಾರತೀಯ ಸೈನಿಕರು ಹುತಾತ್ಮರಾದರು. ಪಾಕಿಸ್ತಾನದ ಸೇನೆಯ ಜೊತೆ ಮೈತ್ರಿಮಾಡಿಕೊಂಡಿದ್ದ 3000ಕ್ಕೂ ಹೆಚ್ಚಿನ ಭಯೋತ್ಪಾದಕರನ್ನು ನಮ್ಮ ಹೆಮ್ಮೆಯ ಸೈನಿಕರು ಹೊಡೆದುರುಳಿಸಿದ್ದನ್ನು ಸ್ಮರಿಸಿದರು. ಅಖಂಡ ಭಾರತದ ಯಾವುದೇ ಪ್ರದೇಶಕ್ಕೆ ಧಕ್ಕೆಯಾದರೂ ಸಂಪೂರ್ಣ ಭಾರತವೇ ಘಟನೆಗಳಿಗೆ ಸ್ಪಂದಿಸುತ್ತದೆ. ವೈವಿಧ್ಯತೆಯಲ್ಲಿ ಏಕತೆಯನ್ನು ಹೊಂದಿರುವ ಭಾರತೀಯರು ಇಂತಹ ಘಟನೆಗಳಿಗೆ ಮನಮಿಡಿಯುತ್ತಾರೆ ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಂಶುಪಾಲರಾದ ಡಾ.ಎಸ್.ಮರೀಗೌಡರು ಮಾತನಾಡುತ್ತಾ ಬಡವರು ಮಾತ್ರ ಭಾರತೀಯ ಸೇನೆಗೆ ಸೇರುತ್ತಾರೆ ಎಂದು ಹೇಳುವುದು ಮೂರ್ಖತನವಾಗಿದೆ', ದೇಶಾಭಿಮಾನ ಹೊಂದಿರುವ ಯಾವುದೇ ವ್ಯಕ್ತಿಯಾದರೂ ಸೇನೆಗೆ ಸೇರಿ ದೇಶ ಸೇವೆ ಹಾಗೂ ದೇಶದ ಜನರ ಸೇವೆ ಮತ್ತು ರಕ್ಷಣೆ ಮಾಡಲು ಉತ್ಸುಕರಾಗಿರುತ್ತಾರೆ. ವಿದ್ಯಾರ್ಥಿ ಜೀವನದಲ್ಲಿಯೇ ಸೇನೆಯ ಬಗ್ಗೆ ಅಪಾರವಾದ ಗೌರವ ಮತ್ತು ಅಭಿಮಾನವನ್ನು ಹೊಂದಬೇಕು. ದೇಶಭಕ್ತಿ ಹಾಗೂ ದೇಶ ನಿಷ್ಠೆಯನ್ನು ನಮ್ಮ ರಕ್ತನಾಳಗಳಲ್ಲಿ ತುಂಬಿಸಿಕೊಳ್ಳುವ ಮೂಲಕ ದೇಶಸೇವೆ ಮಾಡಲು ಸಿದ್ಧರಾಗಬೇಕು ಎಂದು ಕರೆನೀಡಿದರು.

ಕಾರ್ಗಿಲ್ ಯುದ್ಧದಲ್ಲಿ ಹುತಾತ್ಮರಾದ ಯೋಧರಿಗೆ ಪುಷ್ಪನಮನ ಸಲ್ಲಿಸುವ ಮೂಲಕ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ಅಧ್ಯಾಪಕ ಸಲಹೆಗಾರರಾದ ಡಾ.ಪಿ.ಕೆ.ಗೋವರ್ಧನ್, ಅಧ್ಯಾಪಕರು ಹಾಗೂ ಅಧ್ಯಾಪಕೇತರರು, ಎನ್.ಸಿ.ಸಿ ಕೆಡೆಟ್ಸ್ ಮತ್ತು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಹಾಜರಿದ್ದರು.

The "***Kargil Vijay Diwas***" was celebrated at Vidyavardhaka First Grade College, Sheshadri Iyer Road, Mysuru on 26th July, 2024 at 11.30 am in the college Auditorium.

The chief spokesperson Maj. Shriharsha, NCC Officer, VVFGC, Mysuru informed the students that the Vijay Diwas commemorates the success of operation Vijay which was launched to recapture the Indian territories occupied by Pakistani soldiers and Mujaheddins illegally intruding Indian territory in the Kargil- Drass sector. The day honours the bravery

and sacrifice of the Indian armed forces. Maj. Shriharsha gave a complete picture of Indian geographical area safeguarded by Indian army. It may be floods or any kind of civil wars, or any natural calamity that may occur in any part of the country, Indians will certainly respond. He gave a complete picture of the pros and cons of Kargil conflict and battle in which more than 1200 of our soldiers became martyrs and more than 3000 intruding Mujahiddin terrorists allied with Pakisthan army were killed by the proud Indian soldiers.

The Principal of the college Dr.S.MariGowda who presided over the function gave a call to all the students to have a great respect and feel proud of Indian army and to fill our veins with patriotism and loyalty towards the country. It is foolish to say that only poor joins Indian army where as we have great examples of many landlords and rich people joining the army voluntarily with an intention to serve and secure the nation and to give protection for the people.

The programe began with a tribute to the martyrs of Kargil War by showering the flowers. Dr.P.K. Govardhan, Staff Advisor, teaching and non-teaching faculty, NCC cadets and students witnessed the event.

















KARGIL
VIJAY DIWAS


VIDYAVARDHAKA SANGHA(R), MYSURU
VIDYAVARDHAKA FIRST GRADE COLLEGE
KARGIL
VIJAY DIWAS
Resource Person
Major. Shriharsha B S
ANO,NCC Officer, VVFGC, Mysore


VIDYAVARDHAKA SANGHA(R), MYSURU
VIDYAVARDHAKA FIRST GRADE COLLEGE
Sheshadri Iyer Road, Mysuru – 570 001
KARGIL
VIJAY DIWAS
Resource Person
Major. Shriharsha B S
ANO,NCC Officer, VVFGC, Mysore


VIDYAVARDHAKA SANGHA(R), MYSURU
VIDYAVARDHAKA FIRST GRADE COLLEGE
Sheshadri Iyer Road, Mysuru – 570 001
KARGIL
VIJAY DIWAS
Resource Person
Major. Shriharsha B S
ANO,NCC Officer, VVFGC, Mysore